ಸಾವಳಗಿಯಲ್ಲಿ ವಾಹನ ನಿಲ್ದಾಣದ ನಿರ್ಮಾಣ:

೧೫೩೨. ಶ್ರೀ ಬಾಬುರೆಡ್ಡಿ ವಿ. ತುಂಗಳ್(ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕಿನ ಸಾವಳಗಿ ಹೋಬಳಿಯಲ್ಲಿ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣವನ್ನು ನಿರ್ಮಿಸಲು ನಿರ್ಧರಿಸಿದೆಯೇ ?

ಆ) ಹಾಗಿದ್ದರೆ ಈ ಬಸ್ ನಿಲ್ದಾಣದ ಅಂದಾಜು ವೆಚ್ಚವೆಷ್ಟು ಹಾಗೂ ಎಂದಿನಿಂದ ಕೆಲಸ ಆರಂಭ ಮಾಡಲಾಗುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ(ಸಾರಿಗೆ ಮಂತ್ರಿಗಳು) —

ಅ) ಹೌದು.

ಆ) ಬಸ್ ನಿಲ್ದಾಣದ ಅಂದಾಜು ವೆಚ್ಚ ೧.೪೦ ಲಕ್ಷ ರೂ. ಗಳು. ಪ್ರಸಕ್ತ ವರ್ಷದಲ್ಲಿ ಪ್ರಾರಂಭಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅಧ್ಯಕ್ಷರೇ, ೧೨ನೇ ತಾರೀಖಿನ ದಿವಸ ಬೇರೆ ಪ್ರಶ್ನೆ ಮುಖಾಂತರ ನಾನು ಕೇಳಿದ್ದ ಒಂದು ಪ್ರಶ್ನೆಗೆ ಸಾರಿಗೆ ಸಚಿವರು ಸಮರ್ಪಕ ಉತ್ತರ ಕೊಟ್ಟಿರುವುದರಿಂದ ಹೆಚ್ಚಿಗೆ ಕೇಳದೆ ನಿಲ್ದಾಣದ ಶಂಕುಸ್ಥಾಪನೆಗೆ ಯಾವಾಗ ಬರುತ್ತೀರೆಂದು ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧಿವೇಶನ ಮುಗಿದ ನಂತರ.

ಪೋಲೀಸ್ ಠಾಣೆಯಲ್ಲಿ ನಡೆದ ಸಾವುಗಳು

೧೪೧೧. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೬ ರಿಂದ ೧೯೮೮ರ ಮಾರ್ಚ್ ೩೧ರವರೆಗೆ ಎಷ್ಟು ಪೋಲೀಸ್ ಠಾಣೆಯಲ್ಲಿ ನಡೆದ ಜನರ ಸಾವುಗಳು ವರದಿಯಾಗಿವೆ.

ಆ) ಮೇಲ್ಕಂಡ ಪ್ರಕರಣಗಳಲ್ಲಿ ಎಷ್ಟು ಜನ ತಪ್ಪಿತಸ್ಥರ ಮೇಲೆ ಸರ್ಕಾರವು ಇಲಾಖಾ ಹಾಗೂ ಮತ್ತಿತರ ಕ್ರಮ ಕೈಗೊಂಡಿದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ)
೧೯೮೬	೬
೧೯೮೭	೧
೧೯೮೮	೩

(೩೧-೩-೮೮ರ ವರೆಗೆ)

ಆ) ಇಲಾಖಾ ಕ್ರಮ—೧೨ ಜನ ತಪ್ಪಿತಸ್ಥರ ಮೇಲೆ.
ಕ್ರಿಮಿನಲ್ ಮೊಕದ್ದಮೆಗಳು —೯ ಜನ ತಪ್ಪಿತಸ್ಥರ ಮೇಲೆ

ಶ್ರೀ ಜಿ. ಎಸ್. ಆಚಾರ್ (ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಸ್ಫೋಟನ್ ಹೊರಗಡೆ ಆಗುವಂಥ ಸಾವು ಅಥವಾ ಕೊಲೆ ಅನೇಕ ಇರುತ್ತವೆ ಆ ಬಗ್ಗೆ ನಾವು ಸುಳಿವು ನೀಡಿದರೆ ತಕ್ಷಣ ಕ್ರಮ ಕೈಗೊಳ್ಳುತ್ತೇವೆನ್ನುತ್ತಾರೆ ಉದಾಹರಣೆಗೆ ೮೬ರಲ್ಲಿ ೬, ೮೭ರಲ್ಲಿ ೧, ೮೮ರಲ್ಲಿ ಮೊದಲ ಮೂರು ತಿಂಗಳಲ್ಲೇ ೩– ಹೀಗೆ ಒಂದು ರೀತಿಯಲ್ಲಿ ವಿಕ್ರಮ ಸಾಧನೆಯಾಗುತ್ತಿದೆ. ಈ ಸಾವುಗಳಿಗೆ ಕಾರಣಗಳೇನು ? ಇಲಾಖಾ ಕ್ರಮ ಅಥವಾ ಕ್ರಿಮಿನಲ್ ಮೊಕದ್ದಮೆ ಹೀಗೆ ಏನೇನು ಕ್ರಮ ಕೈಗೊಳ್ಳಲಾಗಿದೆ ? ಫಲಿತಾಂಶ ಏನಾಗಿದೆ ತಿಳಿಸುತ್ತೀರಾ ?